81 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕಾ ವಲಯವನ್ನು ಸ್ಥಾಪಿಸಲು ಕೆ.ಐ.ಎ.ಡಿ.ಬಿ.ಯವರು ಭೂಸ್ವಾಧೀನಪಡಿಸಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿ ಕೊಳ್ಳಲಾಗಿದೆ (ಗ್ರಾಮಗಳವಾರು ವಿವರಗಳನ್ನು ನೀಡುವುದು);

ಇ) ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿಗೆ ಸರ್ಕಾರ ನಿಗದಿಪಡಿಸಿರುವ ಮೊತ್ತ ಎಷ್ಟು;

ಈ) ಭೂಸ್ವಾಧೀನಪಡಿಸಿಕೊಂಡ ರೈತರಿಗೂ ಸರ್ಕಾರದಿಂದ ಪರಿಹಾರವನ್ನು ನೀಡಲಾಗಿದೆಯೇ;

ಉ) ಹಾಗಿದ್ದಲ್ಲಿ, ಪ್ರತಿ ಎಕರೆಗೆ ಎಷ್ಟು ಹಣ ನಿಗದಿಗೊಳಿಸಲಾಗಿರುತ್ತದೆ (ರೈತ ಹಾಗೂ ಎಕರೆವಾರು ವಿವರಗಳ ಮಾಹಿತಿ ನೀಡುವುದು)?

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಕುಷ್ಟಗಿ ಗ್ರಾಮದ 38–08 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ವತಿಯಿಂದ ಕೈಗಾರಿಕಾ ವಲಯವನ್ನು ಸ್ಥಾಪಿಸಲು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಕೊಪ್ಪಳ ಜಿಲ್ಲೆಯಲ್ಲಿಯ ಕುಷ್ಟಗಿ ತಾಲ್ಲೂಕಿನ ಕುಷ್ಟಗಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಎಕರೆಗೆ ರೂ. 63,000/– ದಂರೆ ದರ ನಿಗದಿಪಡಿಸಲಾಗಿದೆ.

ಈ) ಹೌದು.

ಉ) ಭೂಸ್ವಾಧೀನಕ್ಕೆ ಒಳಪಟ್ಟ 38–08 ಎಕರೆ ಜಮೀನಿಗೆ ಎಕರೆ 1ಕ್ಕೆ ರೂ. 63,000/–ದಂತೆ ನಿಗದಿಗೊಳಿಸಿದೆ. (ರೈತರ ಹೆಸರು, ಎಕರೆವಾರು ಮತ್ತು ಸರ್ವೆ ನಂಬರ್ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಕರ್ನಾಟಕ ರಾಜ್ಯ ಪತ್ರ

ಭಾಗ–3–ಸೆಕ್ಷನ್ 1

ಶಾಸನಬದ್ದವಲ್ಲದ ಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 28(4)ರ ಮೇರೆಗೆ

ಸಂಖ್ಯೆ: ಸಿ.ಪಿ. 207 ಎಸ್ ಪಿಕ್ಯೂ 93. ದಿನಾಂಕ 9ನೇ ಫೆಬ್ರವರಿ 1995

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966ರ ಕರ್ನಾಟಕ ಕಾಯ್ದೆ ನಂ–05) ವಿಧಿ 28(1)ರ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ತಾರೀಖು 1ನೇ ಮೇ 1989 ಕರ್ನಾಟಕ ಗೆಜೆಟ್‌ನ ಭಾಗ–3–1ರ ಪುಟ 124ರಲ್ಲಿ ಪ್ರಕಟಿಸಲಾಗಿರುವ ದಿನಾಂಕ 25ನೇ ಜನವರಿ 1989 ಅಧಿಸೂಚನೆ ಸಂಖ್ಯೆ 143 ಎಸ್‌ಪಿಕ್ಯೂ 82ರ ಪ್ರಕಾರ ಕರ್ನಾಟಕ ಸರ್ಕಾರವು ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಇದೇ ಅಧಿಸೂಚನೆಯಲ್ಲಿ ಹೇಳಿರುವ ಆದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಇಚ್ಛೆಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿರುವ ಉದ್ದೇಶಕ್ಕೆ ಸ್ವಾಧೀನಪಡಿಸಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆಯ ವಿಧಿ 28 (3)ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ಆದುದರಿಂದ ಈಗ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 28(4) 1966ರ ಕರ್ನಾಟಕ ಕಾಯ್ದೆ ನಂ– 18ರ ಮೇರೆಗೆ ವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರವು ಕೆಳಗೆ ನಮೂದಿಸಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ಘೋಷಿಸಲಾಗಿದೆ.

ಅನುಸೂಚ									
ಗ್ರಾಮ ಉಪ್ಪಗಿ		ಹೋಬಳಿ ಉಪ್ಪಗಿ		ತಾಲ್ಲೂಕು-ಉಪ್ಪಗಿ			ಬೆಲ್ಲ ತಾಯಾರಿಯ		
				ಚಕ್ಕುಬಂದಿ					
ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಡಾಬು	ಸರ್ವೆ ಸಂ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ದೇಣಾದ ವಿಸ್ತೀರ್ಣ
1	2	3	4	5	6	7	8	9	10
1	ದಾಳಪ್ಪ ತಂದೆ ರಾಮಪ್ಪ ಗಡಿ	ಆವರೆ	ಮಿಷ್ಟಿ	29/2	53	53	52/1	52/3	1–21
2	ನಾಗಪ್ಪ ತಂದೆ ರಾಚಪ್ಪ	"	"	56/3	57	53	56/2	56/4	1–21
3	ತಿಮ್ಮಪ್ಪ ತಂದೆ ನರಸಪ್ಪ ಬಡಿಗೇರ	"	"	56/4	58	53	56/3	60	3–28
4	ಆಡವಯ್ಯ ಶಂಕರಪ್ಪ	"	"	60/0	58	52	56/4	60/2	4–04
5	ಕುವಾಪೂರ ಮಠ ಆವರೆ	"	"	60/5	59	52	60/5	61	
6	ಆಡಯ್ಯ ಬಸಯ್ಯಾ ಕಂವಾಪೂರ ಮಠ	"	"	60/2	58	52	60/1	61/3	3–10
7	ಆವರೆ	"	"	60/7	58	52	60/1	60/3	6–22
8	ಮುದ್ರಾಮಯ್ಯಾ ತಂದೆ ಅರವಯ್ಯಾ ಮಠ	"	"	60/3/ಸ	58	52	60/2	60/4	1–29
9	ಸಂಗಯ್ಯಾ ತಂದೆ ಬಸವಯ್ಯಾ ಕಂವಾಮರ ಮಠ	"	"	60/2	58	52	60/2	60/5	3–01
10	ರುದ್ರಯ್ಯಾ ತಂದೆ ಶಾಂತಯ್ಯಾ ಪಂವಾಮರ ಮಠ	"	"	60/6	59	52	60/5	61	6–32
11	ಮುದಕಪ್ಪ ತಂದೆ ಸೇಮಪ ಸಜ್ಜನ	"	"	61/1	62	ಎನ್ ಎಚ್	60/2	60/2	5–27
12	1 ಬಸಪ್ಪ 2 ಬಸಪ್ಪ ತಂದೆ ದೊಡ್ಡ ಬಸಪ್ಪ	"	"	61/2	62	ಎನ್ ಎಚ್	60/1	63	28–05

82 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯೋಜನೆ ರೂಪಿಸಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದ ರೂಪುರೇಷೆಗಳೇನು?

ಇ) ಪ್ರಸ್ತುತ ವರ್ಷದಲ್ಲಿ ಪುನರುಜ್ಜೀವನಗೊಳಿಸಲು ಆಯ್ಕೆ ಮಾಡಿಕೊಂಡಿರುವ ಕೆರೆಗಳ ಸಂಖ್ಯೆ ಎಷ್ಟು?

ಈ) ಈಗಾಗಲೇ ಪೂರ್ಣವಾಗಿರುವ ಕೆರೆಗಳು ಎಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು).

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಹೌದು.